NR547/586.

GR200.

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ: ಕಾ&ಸು/ಮಿಶ್ರ/114/2018–19

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಾರ್ಯಾಲಯ
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ
ಬೆಂಗಳೂರು – 560 001.

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್‌ರವರ,
ಕಾರ್ಯಾಲಯ, ಬೆಂಗಳೂರು,
ದಿನಾಂಕ: 03.09.2018.

(1)

## ಸುತ್ತೋಲೆ

ವಿಷಯ: ಕರ್ನಾಟಕ ಋಣಭಾರ ಮಸೂದೆ–2018ರ ಜಾರಿ ಪೂರ್ವದಲ್ಲಿ ಪೊಲೀಸ್ ಇಲಾಖೆಯಿಂದ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು.

08889

ಉಲ್ಲೇಖ:1) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ರವರ ಸುತ್ತೋಲೆ ಸಂಖ್ಯೆ: ಮುಕಾ/2804/2018 ದಿನಾಂಕ: 31.08.2018.

2) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಕೃಇ 55 ಕೃಉಇ 2015 ದಿನಾಂಕ: 11.07.2015.

3) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಕಾಮತ್ತುಸು/ಮಿಶ್ರ/67/2015–16 ದಿನಾಂಕ: 14.07.2015.

ಪೊಲೀಸ್ ಅಧೀಕ್ಷಕರು
ಸಂಖ್ಯೆ........
ದಿನಾಂಕ: 07/9/18
ಅಪರಾಧ ದಾಖಲಾತಿ ವಿಭಾಗ, ಬೆಂಗಳೂರು

** **

ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ ಋಣಭಾರ ಪೀಡಿತ ಸಣ್ಣ ರೈತರಿಗೆ, ಭೂರಹಿತ ಕೃಷಿ ಕಾರ್ಮಿಕರಿಗೆ ಹಾಗೂ ಅಶಕ್ತ ವರ್ಗದ ಜನರಿಗೆ ಋಣಭಾರ ಸಮಸ್ಯೆಗಳ ಪರಿಹಾರಕ್ಕಾಗಿ "ಕರ್ನಾಟಕ ಋಣಭಾರ ಮಸೂದೆ–2018" ಅನ್ನು ಜಾರಿಗೊಳಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಇಂತಹ ವರ್ಗದ ಜನರ ಮೇಲೆ ಸಾಲ ನೀಡಿರಬಹುದಾದ ಲೇವಾದೇವಿಗಾರರು ಅಥವಾ ಹಣಕಾಸು ಸಂಸ್ಥೆಗಳು ಸಾಲ ಮರು ಪಾವತಿಗಾಗಿ ವಿವಿಧ ರೀತಿಯ ಒತ್ತಡಗಳನ್ನು ಹಾಕುತ್ತಿರುವುದು ಕಂಡು ಬರುತ್ತಿದೆ.

ಆದ್ದರಿಂದ ಸಾಲ ಪಡೆದವರ ಮೇಲೆ ಯಾವುದೇ ರೀತಿಯ ಕಾನೂನು ಬಾಹಿರ ಒತ್ತಡ ಹಾಕದಂತೆ/ ದೌರ್ಜನ್ಯ ಎಸಗದಂತೆ ಪೊಲೀಸ್ ಇಲಾಖಾ ವತಿಯಿಂದ ಈ ಕೆಳಗಿನಂತೆ ಕ್ರಮಕೈಗೊಳ್ಳಲು ಎಲ್ಲಾ ಘಟಕಾಧಿಕಾರಿಗಳಿಗೆ ಆದೇಶಿಸಿದೆ.

1) The Karnataka Moneylenders Act 1961; The Karnataka Pawnbrokers Act 1961; The Chit Funds Act 1982 and The Karnataka Prohibition of Charging Exorbitant Interest Act 2004 ಗಳನ್ನು ಹಾಗೂ ಅದರಡಿ ರಚಿಸಲಾಗಿರುವ ನಿಯಮಗಳನ್ನು ಮತ್ತು ಮತ್ತಿತರ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಕ್ರಮತೆಗೆದುಕೊಳ್ಳುವುದು.

2) ಹಣ ಲೇವಾದೇವಿ ಮತ್ತು ಸಾರ್ವಜನಿಕರಿಗೆ ಅದರಲ್ಲೂ ರೈತರಿಗೆ ಅನೌಪಚಾರಿಕ ಸಾಲ ನೀಡುವ ಚಟುವಟಿಕೆಗಳನ್ನು ಜಾರಿಯಲ್ಲಿರುವ ಅಧಿನಿಯಮ/ ಕಾನೂನುಗಳಾನುಸಾರ ಪಾಲಿಸಲಾಗುತ್ತಿದೆಯೇ ಮತ್ತು ಸಾಲ ಮರುಪಾವತಿಗಾಗಿ ಅನಧಿಕೃತವಾಗಿ ಒತ್ತಡ/ ಕಿರುಕುಳ ನೀಡಲಾಗುತ್ತಿದೆಯೇ ಎಂಬ ಬಗ್ಗೆ ನಿಗಾವಹಿಸುವುದು.

3) ಹೆಚ್ಚು ಪ್ರಮಾಣದಲ್ಲಿ ಬಡ್ಡಿಯನ್ನು ವಸೂಲಿ ಮಾಡುವುದು ಮತ್ತು ಸಾಲು ಮರುಪಾವತಿಗಾಗಿ ಸಾರ್ವಜನಿಕರು ಹಾಗೂ ರೈತರನ್ನು ಶೋಷಿಸುತ್ತಿರುವ ಬಗ್ಗೆ ಯಾವುದೇ ರೂಪದಲ್ಲಿ ದೂರು ಬಂದಲ್ಲಿ ಅಥವಾ ಸ್ವಯಂ ಪ್ರೇರಿತವಾಗಿ ಅಂತಹ ಪ್ರಕರಣಗಳನ್ನು ಮೇಲ್ಕಂಡ ಅಧಿನಿಯಮಗಳನ್ವಯ ಕ್ರಮತೆಗೆದುಕೊಳ್ಳುವುದು.

4) ಉಲ್ಲೇಖ(3)ರಲ್ಲಿ ನಮೂದಿಸಿದ ಸುತ್ತೋಲೆಯನ್ವಯ ಪ್ರತಿಯೊಂದು ಜಿಲ್ಲೆಯಲ್ಲಿ ಹಾಗೂ ನಗರ ವ್ಯಾಪ್ತಿಯಲ್ಲಿ ಸ್ಥಾಪಿಸಲಾದ "ಸಹಾಯವಾಣಿ ಕೇಂದ್ರ"ವು ದಿನದ 24 ಗಂಟೆಯೂ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು ಹಾಗೂ ಇದರ ನಿರ್ವಹಣೆಗಾಗಿ ಸಿವಿಲ್/ನಿಸ್ತಂತು ವಿಭಾಗದ ಓರ್ವ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮಟ್ಟದ ಅಧಿಕಾರಿಯನ್ನು ನಿರ್ವಹಣೆಗಾಗಿ ನೇಮಿಸುವುದು.

5) ಮೇಲ್ಕಂಡ ಸಹಾಯವಾಣಿ ಕೇಂದ್ರ/ನಿಯಂತ್ರಣ ಕೊಠಡಿಯ ಮೂಲಕ ಸ್ವೀಕರಿಸಿದ ಮಾಹಿತಿಯನ್ನು ವಿಳಂಬಕ್ಕೆ ಆಸ್ಪದವಿಲ್ಲದೆ ಜಿಲ್ಲಾ ಮಟ್ಟದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಿಗೆ ಹಾಗೂ ನಗರ ಮಟ್ಟದಲ್ಲಿ ಉಪ ಪೊಲೀಸ್ ಆಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ ರವರಿಗೆ ರವಾನಿಸುವುದು. ಮತ್ತು ಸದರಿ ಅಧಿಕಾರಿಗಳು ಈ ಬಗ್ಗೆ ತಕ್ಷಣವೇ ಕಾರ್ಯಪ್ರವೃತ್ತರಾಗುವುದು.

6) ಮುದ್ರಣ ಹಾಗೂ ದೃಶ್ಯ ಮಾಧ್ಯಮ ಮೂಲಕ, ಕೇಬಲ್ ಟಿ.ವಿ. ಮೂಲಕ, ಕರ ಪತ್ರ ಹಂಚುವಿಕೆ ಮೂಲಕ, ಜಾಹಿರಾತು ಮೂಲಕ ನಿಯಂತ್ರಣ ಕೊಠಡಿಯಲ್ಲಿನ "ಸಹಾಯವಾಣಿ"ಯ ದೂರವಾಣಿ ಸಂಖ್ಯೆಯನ್ನು ನಮೂದಿಸಿ ವ್ಯಾಪಕ ಪ್ರಚಾರವನ್ನು ಕೈಗೊಳ್ಳುವುದು.

7) ಅನಧಿಕೃತ ಬಡ್ಡಿ ವ್ಯವಹಾರ/ಲೇವಾದೇವಿಯನ್ನು ಮಾಡುವ ವ್ಯಕ್ತಿಗಳ ಬಗ್ಗೆ ಹಾಗೂ ಸಾರ್ವಜನಿಕರಿಗೆ ಹಾಗೂ ಅಶಕ್ತ ರೈತರಿಗೆ ಸಾಲ ಮರುಪಾವತಿಗಾಗಿ ಒತ್ತಡ ಹೇರುವವರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಬೀಟ್ ಸಿಬ್ಬಂದಿಯವರ ಸಹಾಯವನ್ನು ಉಪಯೋಗಿಸಿಕೊಳ್ಳುವುದು.

8) ಸಾಮಾಜಿಕ ಜಾಲ ತಾಣಗಳಾದ ವಾಟ್ಸ್ ಅಫ್, ಫೇಸ್ ಬುಕ್, ಪೊಲೀಸ್ ವೆಬ್‌ಸೈಟ್ ಮುಂತಾದ ಮೂಲಕ ವ್ಯಾಪಕ ಪ್ರಚಾರವನ್ನು ಕೈಗೊಂಡು, ಮಾಹಿತಿಯನ್ನು ಸಂಗ್ರಹಿಸುವುದು.

**(ನೀಲಮಣಿ ಎನ್.ರಾಜು, ಐಪಿಎಸ್)**
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ:

ಎಲ್ಲಾ ಘಟಕಾಧಿಕಾರಿಗಳಿಗೆ

ಪ್ರತಿಯನ್ನು ಅಭಿನಂದನೆಗಳೊಂದಿಗೆ

1) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು
2) ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.

THI - 1100 HRS.
08/09/18.